8

# ಯೇಸು: ನಮ್ಮ ವಿಮೋಚಕನು

ಹೃದಯಗಳನ್ನು ಮುರಿಯಲಿಕ್ಕೆ ಮತ್ತು ಯೇಸುವಿಗಾಗಿ ಜೀವಿಸಲು ಪಾಪಿಗಳಿಗೆ ಒತ್ತಾಯ ಪಡಿಸಲಿಕ್ಕೆ ಬಲವು ಯೇಸುವಿನ ಪ್ರಾಯಶ್ಚಿತ್ತದ ಕಥೆಯಲ್ಲಿ ಇರುತ್ತದೆ. ಹೆಚ್ಚು ಮುಖ್ಯವಾದ ವಿಷಯವು ಹೇಗೆ ಇರುವುದು?

"ಪ್ರಾಯಶ್ಚಿತ್ತ ಮಾಡು"[1] ಎಂಬ ಪದವು ತಿದ್ದು, ಸಂಗತಿಗಳನ್ನು ಸರಿಪಡಿಸು ಇಲ್ಲವೇ ತಪ್ಪು ಮಾಡಿದ ವ್ಯಕ್ತಿಗೆ ತೃಪ್ತಿಯನ್ನು ತೆಗೆದುಕೊಂಡು ಬಾ ಎಂಬ ಅರ್ಥ ಕೊಡುತ್ತದೆ. ಇದರ ಪರಿಣಾಮವಾಗಿ ದೂರವಾಗಿದ್ದ ಇಬ್ಬರು "ಒಂದಾಗುತ್ತಾರೆ." ಮೋಶೆಯು ಹೊಡೆದಾಡಿಕೊಳ್ಳುತ್ತಿದ್ದ ಇಬ್ಬರನ್ನು "ಸಮಾಧಾನಪಡಿಸ" ಬೇಕೆಂದಿದ್ದನು (ಅಪೊಸ್ತಲರ ಕೃತ್ಯ 7:26; ASV). "Atonement" ಎಂಬ ಪದವು ಅಕ್ಷರಶಃ ವಾಗಿ "*at one* ment" ಎಂದಾಗಿರುವುದು; ಅದರ ಅರ್ಥವು ಒಪ್ಪಂದ, ಹೊಂದಿಕೆ, ಸಂಧಾನ ಎಂದು ಆಗುವುದು.

ಹೊಸ ಒಡಂಬಡಿಕೆಯ KJVಯಲ್ಲಿ ಒಂದೇ ಸಾರಿ ಕಂಡುಬರುವ "atonement" ಪದಕ್ಕಾಗಿ ಜವಾಬ್ದಾರಿಯಾಗಿರುವ ಗ್ರೀಕ ಪದವು[2] (ರೋಮಾಪುರ 5:11) ಅಕ್ಷರಶಃ ವಾಗಿ ನಾಣ್ಯಗಳಂತೆ ಸಮನಾದ ಮೌಲ್ಯಗಳ ಬದಲಾಯಿಸುವಿಕೆ ಎಂದರ್ಥವಾಗುತ್ತದೆ. ಯೋಗ್ಯ ಬದಲಾಯಿಸುವಿಕೆಯು ಭಿನ್ನತೆಗಳನ್ನು ಸರಿಪಡಿಸಿ ಕೊಳ್ಳುವಿಕೆಯಲ್ಲಿ, ಸಂಧಾನದಲ್ಲಿ, ಒಂದು ಪ್ರಾಯಶ್ಚಿತ್ತದಲ್ಲಿ ಪರಿಣಾಮಗೊಳ್ಳುತ್ತದೆ.

"ಪ್ರಾಯಚ್ಚಿತ್ತ" ಎಂದು ಭಾಷಾಂತರಿಸಲ್ಪಟ್ಟ ಹೀಬ್ರೂ ಪದವು[3] ಅಕ್ಷರಶಃವಾಗಿ "ಮುಚ್ಚುವುದು" ಎಂದರ್ಥಕೊಡುತ್ತದೆ. ನಾವೆಯ ಮೇಲೆ ನೋಹನು ಕಪ್ಪುಕಾಳವನ್ನು ಹಚ್ಚಿದ್ದನ್ನು ಇದು ವಿವರಿಸುತ್ತದೆ. ಏಸಾವನನ್ನು ಸಮಾಧಾನ ಪಡಿಸಲು ಕಳುಹಿಸಿದ ಯಾಕೋಬನ ಕಾಣಿಕೆಯನ್ನು ಇದು ವಿವರಿಸುತ್ತದೆ. "ನನ್ನ ಮುಂದೆ ಹೋಗುವ ಈ ಕಾಣಿಕೆಯಿಂದ ಏಸಾವನನ್ನು ಸಮಾಧಾನ ಪಡಿಸುತ್ತೇನೆ (ಅವನ ಮುಖವನ್ನು ಮುಚ್ಚುತ್ತೇನೆ)" (ಆದಿಕಾಂಡ 32:20). ಈ ಪದವು "ಪಾಪಕ್ಕಾಗಿ ಮುಚ್ಚುವಂಥದ್ದು, ಸಂತೃಪ್ತಿಕೊಳಿಸುವುದು, ಪ್ರಾಯಶ್ಚಿತ್ತ ಮಾಡುವುದೂ, ಪಾಪನಿವಾರಣೆ" ಎಂದರ್ಥ ಕೊಡುವಂಥದ್ದಾಗಿದೆ.

"ಪಾಪ" ಎಂಬ ಪದವು "ಗುರಿಯನ್ನು ತಪ್ಪಿಸಿಕೊ" (ಬಾಣವನ್ನು ಎಸೆಯುವದರಲ್ಲಿ ಇದ್ದಂತೆ) ಎಂಬ ಅರ್ಥವುಳ್ಳ ಗ್ರೀಕ ಪದದಿಂದ[4] ಬರುತ್ತದೆ. ಅಂದರೆ ತಪ್ಪುಮಾಡಿ, ದೇವರ ಮುಂದೆ ಅಪರಾಧಿಯಾಗಿರುವುದು. ದೇವರು ಪಾಪವನ್ನು ಸಹಿಸಲಾರದವನಾಗಿದ್ದುದ ರಿಂದ (ಧರ್ಮೋಪದೇಶಕಾಂಡ 32:3, 4; ಹಬಕ್ಕೂಕ 1:13; ಯೋಹಾನ 8:21), ಆತನು ಏದೆನಿನಿಂದ ಪಾಪಿಗಳನ್ನು ಹೊರಗೆ ದೊಬ್ಬ ಬೇಕಾಯಿತು. ತನ್ನ ನಿರ್ಮಾಣಿಕನಿಂದ ದೂರ ಹೋಗೂವುದು ಪಾಪದ ಪರಿಣಾಮವಾಗಿತ್ತು. ಪಾಪವು ಪರಲೋಕವನ್ನು ಪ್ರವೇಶಿಸಲಾರದ್ದರಿಂದ (ಯೋಹಾನ 8:21, 24; ಪ್ರಕಟನೆ 21:27), ವಿಶ್ವದ ಅತೀ ಸಂದಿಗ್ಧವಾದ ಸಮಸ್ಯೆಯು ಸಂಧಾನ, ಸಂತೃಪ್ತಿಗೊಳಿಸುವಿಕೆ, ಪ್ರಾಯಶ್ಚಿತ್ತವಾಗಿತ್ತು. ಅದರಿಂದ ಪಾಪಿಗಳು ದೇವರ ಮೆಚ್ಚಿಕೆಗೆ ಹಾಗೂ ಅಂತಿಮವಾಗಿ ಪರಲೋಕದಲ್ಲಿ ಆತನ ಸನ್ನಿಧಿಗೆ ಪುನಃ ಸ್ಥಾಪಿಸಲ್ಪಡುವುದಾಗಿತ್ತು.

## ವಿಮೋಚನೆಯು ಅಗತ್ಯವಾದದ್ದಾಗಿದೆ

ಆದಾಮ ಮತ್ತು ಹವ್ವರು ಮಾತ್ರವೇ ದೇವರಿಗೆ ವಿರೋಧವಾಗಿ ಪಾಪ ಮಾಡಿದವರಾಗಿರಲಿಲ್ಲ. ತನ್ನ ಮನಸ್ಸನ್ನು ಉಪಯೋಗಿಸುವ ಹಕ್ಕುಳ್ಳ ಹಾಗೂ ತಪ್ಪಿನಿಂದ ಸರಿಯಾದದ್ದನ್ನು ತಿಳಿದು ಕೊಳ್ಳಲು ಬೆಳೆಯುವಂಥ ಪ್ರತಿಯೊಬ್ಬ ಇತರ ವ್ಯಕ್ತಿಯು ನೀತಿಯ ಗುರುತನ್ನು ತಪ್ಪಿಸಿಕೊಂಡಿದ್ದಾನೆ ("ಎಲ್ಲಾ ಅನೀತಿಯು ಪಾಪವಾಗಿದೆ"; 1 ಯೋಹಾನ 5:17). ಎಲ್ಲರೂ ದೇವರ ಮಟ್ಟದ ಕೊರತೆಯುಳ್ಳವರಾಗಿದ್ದಾರೆ (ರೋಮಾಪುರ 3:23). "ನನ್ನಲ್ಲಿ ಪಾಪವನ್ನು ತೋರಿಸಿಕೊಡುವವರು ನಿಮ್ಮೊಳಗೆ ಯಾರಿದ್ದಾರೆ?" (ಯೋಹಾನ 8:46) ಎಂಬ ಉತ್ತರವಿಲ್ಲದೇ ಯೇಸುವನ್ನು ಬಿಟ್ಟು ಬೇರೆ ಯಾವ ಮನುಷ್ಯನು ಆಹ್ವಾನಕೊಡಬಲ್ಲನು?

ಮನುಷ್ಯನ ಪ್ರಗತಿಯಾಗಿದ್ದರೂ, ಈ ಮೂರು ಸಾವಿರ ವರ್ಷಗಳ ಹಳೇ ಪ್ರಶ್ನೆಯು ಇನ್ನೂ ನಿಶೇದಾರ್ಥಕವಾದ ಉತ್ತರದ ಅಗತ್ಯತೆಯುಳ್ಳದ್ದಾಗಿದೆ: "ನನ್ನ ಹೃದಯವನ್ನು ಶುದ್ಧಿ ಮಾಡಿಕೊಂಡಿದ್ದೇನೆ; ನನ್ನ ಪಾಪವನ್ನು ಕಳೆದುಕೊಂಡು ನಿರ್ಮಲನಾಗಿದ್ದೇನೆ ಎಂದು ಯಾರು ಹೇಳಬಲ್ಲರು?" (ಜ್ಞಾನೋಕ್ತಿ 20:9). ಯೇಸುವನ್ನು ಬಿಟ್ಟು ಬೇರೆ ಯಾರು ಹಾಗೆ ಹೇಳಬಲ್ಲರು. ಪಾಪದ ಜಾಗತಿಕತೆಯು ಮಿತಿಯುಳ್ಳ ಪ್ರಾಯಶ್ಚಿತ್ತದ ಬೋಧನೆಯು ಸತ್ಯದ ಕೊರತೆಯುಳ್ಳದ್ದಾಗಿದೆ ಎಂಬುದನ್ನು ತೋರಿಸುತ್ತದೆ. ಜಾಗತಿಕ ಪ್ರಾಯಶ್ಚಿತ್ತವು ಮಾತ್ರವೇ ಜಾಗತಿಕ ಪಾಪಕ್ಕೆ ವಿರುದ್ಧವಾಗಿ ಪರಿಣಾಮಕಾರಿಯಾದದ್ದಾಗಿರುವುದು. ದೇವರು ಪಕ್ಷಪಾತ ತೋರಿಸದಿದ್ದರೆ (ಅಪೊಸ್ತಲರ ಕೃತ್ಯ 10:34) ಹಾಗೂ ಎಲ್ಲಾ ತನ್ನ ಜೀವಿಗಳನ್ನು ಆತನು ಪ್ರೀತಿಸಿದರೆ, ಆಗ ಪಾಪಕ್ಕಾಗಿ ಪ್ರಾಯಶ್ಚಿತ್ತದ ಆತನ ಯೋಜನೆಯು ಎಲ್ಲಾ ಜನರನ್ನು ಒಳಗೊಂಡಿರತಕ್ಕದ್ದು.

## ವಿಮೋಚನೆಯು ವೈಯಕ್ತಿಕವಾದದ್ದು

ಪಾಪವು ಬಾಧ್ಯವಾಗಿ ಹೊಂದಿದ್ದಲ್ಲ, ಇಲ್ಲವೇ ಅದನ್ನು ಬದಲಾಯಿಸಲಿಕ್ಕೂ ಆಗುವದಿಲ್ಲ. ಪ್ರತಿಯೊಬ್ಬ ಪಾಪಿಯೂ "ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರುಳುಗೊಂಡವನಾಗಿ ಪ್ರೇರೇಪಿಸಲ್ಪಟ್ಟಿದ್ದಾನೆ" (ಯಾಕೋಬ 1:14).[5] ಈ ಕಾರಣದಿಂದ ನಮ್ಮ ಪಾಪಕ್ಕಾಗಿ ಯೇಸುವಿನ ಪ್ರಾಯಶ್ಚಿತ್ತವು ಎಷ್ಟೇ ವಿಶಾಲವಾಗಿದ್ದರೂ ಅದು ಪ್ರಾಯಶ್ಚಿತ್ತದ ವಿಷಯಗಳಿಗೆ ವೈಯಕ್ತಿಕವಾಗಿ ಉತ್ತರಿಸುವ ಪ್ರತಿಯೊಬ್ಬ ವ್ಯಕ್ತಿಗೆ ಮಾತ್ರವೇ ಪರಿಣಾಮಕಾರಿಯಾದದ್ದಾಗುತ್ತದೆ. ಪಾಪವು ವೈಯಕ್ತಿಕವಾದದ್ದಾಗಿದ್ದರೆ, ಅದು ಪ್ರಾಯಶ್ಚಿತ್ತ ಮಾಡುವದರ ಒತ್ತಡವೂ ಆಗಿರುತ್ತದೆ. ಪಾಪವು ವ್ಯಕ್ತಿಗತವಾದದ್ದಾಗಿದ್ದರೆ, ಆಗ ಸಂಧಾನವೂ ವ್ಯಕ್ತಿಗತವಾದದ್ದಾಗಿರತಕ್ಕದ್ದು. ಹಾಗಾದರೆ ವೈಯಕ್ತಿಕ ಪ್ರತಿಕ್ರಿಯೆಯಿಲ್ಲದೇ ಪ್ರಾಯಶ್ಚಿತ್ತವು ವ್ಯರ್ಥವಾದದ್ದಾಗುತ್ತದೆ. ತಮ್ಮ ಮಕ್ಕಳ ಪರವಾಗಿ ತಂದೆತಾಯಿಗಳ ಪ್ರತ್ಯುತ್ತರವು ಅಸಾಧ್ಯವಾದದ್ದಾಗಿದೆ ಹಾಗೂ ಇನ್ನೊಬ್ಬನ ಬದಲಾಗಿ ಸ್ನೇಹಿತನು ಬಾಪ್ತಿಸ್ಮ ಹೊಂದುವುದು[6] ಅಸಾಧ್ಯವಾದದ್ದಾಗಿದೆ. "ನಮ್ಮಲ್ಲಿ ಪ್ರತಿಯೊಬ್ಬನು ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರ ಕೊಡಲೇಬೇಕು" (ರೋಮಾಪುರ 14:12).

## ವಿಮೋಚನೆಯು ಕ್ರಿಸ್ತನಲ್ಲಿ ಮಾತ್ರವೇ ಇರುವುದು

ಪಾಪದ ಸಂಬಳ ಮರಣ ಹಾಗೂ ಕರ್ತನ ಸಾನಿಧ್ಯದಿಂದ ಹೊರಗೆ

ಹಾಕಲ್ಪಡುವುದು. ದೇವರು ಮಾಡುವ ಕಾರ್ಯದಲ್ಲಿ ಯಾವ ಕುಂದೂ ಇಲ್ಲ; ಆತನು ನಡಿಸುವದೆಲ್ಲಾ ನ್ಯಾಯ (ಧರ್ಮೋಪದೇಶಕಾಂಡ 32:1-4): ಮನುಷ್ಯನ ಪಾಪಗಳಿದ್ದರೂ ಅವನನ್ನು ಪರಲೋಕಕ್ಕೆ ತೆಗೆದು ಕೊಂಡು ಹೋದರೆ ದೇವರು ನೀತಿವಂತನಾಗಿರುವದಿಲ್ಲ, ಆದರೂ ದೇವರು ಯಾವಾಗಲೂ ಮನುಷ್ಯನನ್ನು ಪ್ರೀತಿಸಿದ್ದಾನೆ ಮತ್ತು ಅದೇ ರೀತಿಯಲ್ಲಿ ಅವನ ರಕ್ಷಣೆಗಾಗಿ ಬಯಿಸಿದ್ದಾನೆ (ಯೆಹೆಜ್ಕೇಲ 33:11; ಯೋಹಾನ 3:16). ದೇವರು ನ್ಯಾಯವಂತನಾಗಿದ್ದು, ಅದೇ ಸಮಯದಲ್ಲಿ ಪಾಪಿಗಳನ್ನು ಹೇಗೆ ನೀತಿವಂತರನ್ನಾಗಿ ಮಾಡುವನು? (ನೋಡಿರಿ ರೋಮಾಪುರ 3:25ಬಿ, 26). ಇದು ಪರಲೋಕದ ಸಮಸ್ಯೆಯಾಗಿತ್ತು.

**ಪಿತೃಗಳ ನಿಯಮಗಳನ್ನು ಕೈಕಳ್ಳುವುದು ಸಾಕಷ್ಟಾಗಿರಲಿಲ್ಲ**

ದೇವರ ನಿಯಮಗಳು ಪ್ರಾಣಿ ಯಜ್ಞಗಳ ಆಜ್ಞೆ ಮಾಡಿದವು ಹಾಗೂ ಮಾನವ ರಕ್ತವನ್ನು ಸುರಿಸುವದನ್ನು ಇಲ್ಲವೇ ಯಾವುದೇ ರಕ್ತವನ್ನು ತಿನ್ನುವುದನ್ನು ಪ್ರತಿಬಂಧಿಸಿದವು. ಅಂಥ ನಿಯಮಗಳು ಪಿತೃಗಳನ್ನು ಪರಲೋಕದ ಮಾರ್ಗದಲ್ಲಿಡಲು ಅವಶ್ಯವಾಗಿದ್ದವು. ಅಂಥ ಆಚಾರಗಳು ಪಾಪಕ್ಕಾಗಿ ಪ್ರಾಯಶ್ಚಿತ್ತಗಳಾಗಿದ್ದರೆ, ಪರಲೋಕದ ಸಮಸ್ಯೆಯು ಪರಿಹರಿಸಲ್ಪಡುತ್ತಿತ್ತು - ಆದರೆ ಅವು ಹಾಗೆ ಮಾಡಲಿಲ್ಲ.

**ಮೋಶೆಯ ನಿಯಮಗಳನ್ನು ಕೈಕೊಳ್ಳುವುದು ಸಾಕಷ್ಟಾಗಿರಲಿಲ್ಲ**

ಮೋಶೆಯ ನಿಯಮವನ್ನು ಕಡೆಗಣಿಸಿದವರಿಗೆ, ಕೈಕೊಳ್ಳದವರಿಗೆ ಶಾಪ ಬರುವುದು (ಧರ್ಮೋಪದೇಶಕಾಂಡ 27:26; ಇಬ್ರಿಯ 10:26, 27). ದೂಷಣೆಯಿಲ್ಲದೆ ಕೈಕೊಂಡವರಿಗೂ (ಲೂಕ 1:6; ಫಿಲಿಪ್ಪಿ 3:6) ಸಹ ಪಾಪಗಳು ಅವರ ವಿರುದ್ಧವಾಗಿ ಗುರುತಿಸಲ್ಪಟ್ಟಿದ್ದವು, ಯಾಕಂದರೆ ಪ್ರಾಣಿಗಳ ರಕ್ತವು ಪಾಪವನ್ನು ತೆಗೆದು ಹಾಕಲಿಕ್ಕೆ ಅಸಾಧ್ಯವಾಗಿತ್ತು (ಇಬ್ರಿಯ 10:4). "ಬದುಕಿಸುವದಕ್ಕೆ ಶಕ್ತವಾಗಿರುವ ಧರ್ಮಶಾಸ್ತ್ರವು ಕೊಡಲ್ಪಟ್ಟಿದ್ದರೆ ಸಂದೇಹವಿಲ್ಲದೇ ಧರ್ಮಶ್ತ್ರಾದಿಂದಲೇ ನೀತಿಯುಂಟಾಗುತ್ತಿತ್ತು" (ಗಲಾತ್ಯ 3:21).

**ದೇವರನ್ನು ಮತ್ತು ಕ್ರಿಸ್ತನನ್ನು ನಂಬುವುದು ಮತ್ತು ವಿಧೇಯನಾಗುವುದು ಸಾಕಷ್ಟಾಗಿರುವದಿಲ್ಲ**

ದೇವರು ತನ್ನ ಸಂತತಿಯನ್ನು ಆಕಾಶದ ನಕ್ಷತ್ರಗಳಷ್ಟು ಅಸಂಖ್ಯಾತವಾಗಿ ಮಾಡುವನೆಂದು ನಂಬಿದ ಎಂಭತ್ತೈದು ವರ್ಷ ವಯಸ್ಸಿನ ಅಬ್ರಹಾಮನಲ್ಲಿ ವಿಶ್ವಾಸದ ಮಹಾ ಕಾರ್ಯವು ದೃಷ್ಟಾಂತವಾಗಿ ಕೊಡಲ್ಪಟ್ಟಿತು (ಆದಿಕಾಂಡ 15:6). ಅಬ್ರಹಾಮನಲ್ಲಿಯ ವಿಶ್ವಾಸದ ಈ ಕಾರ್ಯವು ಹೊಗಲಲ್ಪಟ್ಟಿತು ಮತ್ತು ಹೊಸ ಒಡಂಬಡಿಕೆಯಲ್ಲಿ ನಮಗೆ ಒಂದು ಉದಾಹರಣೆಯಾಗಿ ಮುಂದಿಡಲ್ಪಟ್ಟಿತು (ರೋಮಾಪುರ 4:16-24; ಗಲಾತ್ಯ 3:16-29). ನಂಬುವ (ನೋಡಿರಿ ಯೋಹಾನ 6:29) ಮತ್ತು ವಿಧೇಯರಾಗುವ ಕಾರ್ಯವು ಪಾಪಕ್ಕಾಗಿ ಪರಿಹಾರವಾಗಿದ್ದರೆ, ಪರಲೋಕದ ಸಮಸ್ಯೆಯು ಪರಿಹಾರಿಸಲ್ಪಡುತ್ತಿತ್ತು. ಪ್ರೀತಿಯಿಂದ ಕಾರ್ಯಮಾಡುವ (ಗಲಾತ್ಯ 5:6) ವಿಧೇಯ ವಿಶ್ವಾಸವು (ರೋಮಾಪುರ 1:5) ಪರಲೋಕಕ್ಕೆ ಹೋಗಲು ಯಾರಿಗಾದರೂ ಅತ್ಯಗತ್ಯವಾದದ್ದಾಗಿದೆ (ಪ್ರಕಟನೆ 2:10), ಆದರೆ ಯಾವುದೇ ಮಾನವ ಜೀವಿಯು ಮಾಡುವ ಯಾವುದೇ ಕಾರ್ಯವು ಅವನನ್ನು ನೀತಿವಂತನಾಗಿ ಮಾಡುವದಿಲ್ಲ. ದೇವರ ವಾಕ್ಯಕ್ಕೆ ಖಂಡಿತವಾದ ವಿಧೇಯತೆಯು ಮಹತ್ವವುಳ್ಳದ್ದಾಗಿರುವಂತೆಯೇ,

ವಿಧೇಯತೆಯು ಪರಲೋಕದ ಸಮಸ್ಯೆಗೆ ಪರಿಹಾರವಾಗಿರುವದಿಲ್ಲ.

**ಒಳ್ಳೆ ಕಾರ್ಯಗಳನ್ನು ಮಾಡುವುದು ಸಾಕಾಗುವುದಿಲ್ಲ**

ದೇವರ ಕಣ್ಣುಗಳಲ್ಲಿ ಒಳ್ಳೆಯ ಕಾರ್ಯಗಳು ಅಮೂಲ್ಯವಾದವುಗಳೂ ಅವಶ್ಯವಾದವುಗಳೂ ಆಗಿವೆ (ಮತ್ತಾಯ 25:31-46), ಆದರೆ ಅವು ಮನುಷ್ಯನ ಪಾಪಗಳಿಗೆ ಪರಿಹಾರ ಮಾಡಲಾರವು. ತನ್ನ ಮಗನು ಅವಿಧೇಯನಾದ ಪ್ರತಿಯೊಂದು ಸಲ ಬಾಗಿಲ ಪಟ್ಟಿಯಲ್ಲಿ ಒಂದೊಂದು ಮೊಳೆಯನ್ನು ಬಡಿಯುತ್ತಿದ್ದವನು ಅವನು ವಿಧೇಯನಾದ ಪ್ರಿತಿಯೊಂದು ಸಲ ಪ್ರತಿಯೊಂದು ಮೊಳೆಯನ್ನು ಕಿತ್ತು ಹಾಕಿದನು, ಆದರೂ ಅಸಹ್ಯವಾದ ಗುರುತು ಉಳಿಯಿತು: ತೂತುಗಳಿದ್ದ ಬಾಗಿಲು. ವಿಧೇಯತೆಯು ಅಗತ್ಯವಾದದ್ದು, ಆದರೆ ಅದು ಅವಿಧೇಯತೆಯನ್ನು ಅಳಿಸಿಹಾಕುವದಿಲ್ಲ. ಜಾರಿಣಿಯು ತನ್ನ ಅಗತ್ಯತೆಯುಳ್ಳವರಿಗೆ ಒಳ್ಳೆಯ ನೆರೆಯವಳಾಗಿದ್ದರೂ ಆಕೆ ಇನ್ನೂ ತನ್ನ ಅಪರಾಧದಲ್ಲಿ ಇರುವಳು. ಕಳ್ಳನು ಬಡವರಿಗೆ ಹಣಕೊಟ್ಟರೂ ಅವನು ಇನ್ನೂ ಅಪರಾಧಿಯಾಗಿದ್ದಾನೆ. ತನ್ನ ಹೆಚ್ಚು ಶಪಿಸುವಿಕೆಗೆ ಸರಿದೂಗಿಸಲು ಹೆಚ್ಚು ಪ್ರಾರ್ಥಿಸುವ ಮನುಷ್ಯನು ತಪ್ಪಾದ ವಿಧಾನವನ್ನು ಉಪಯೋಗಿಸುವನು. ಪಾಪಿಗಳ ರಕ್ಷಣೆಯು ಜಮಾ - ಖರ್ಚಿನ ವಿಧಾನದಿಂದ ಸಾಧಿಸಲ್ಪಡಲಿಕ್ಕಾಗುವದಿಲ್ಲ. ಪರಲೋಕದ (ಮತ್ತು ಲೋಕದ) ಮಹಾ ಸಮಸ್ಯೆಗೆ ಇದು ಪರಿಹಾರವಾಗಿರುದಿಲ್ಲ.

**ನೀತಿಯನ್ನು ವರ್ಗಾಯಿಸುವುದು ಅಸಾಧ್ಯವಾಗಿದೆ**

ಮನುಷ್ಯನ ನಿರೀಕ್ಷೆಯಿಲ್ಲದ, ಖಂಡಿಸಲ್ಪಟ್ಟ ಸ್ಥಿತಿಗಾಗಿ ದೇವರು ರೂಪಿಸಿದ ಪರಿಹಾರವು ಮಾನವ ಜೀವಿಗಳಿಗೆ ಕ್ರಿಸ್ತನ ನೀತಿಯ ವರ್ಗಾವಣೆಯಾಗಿತ್ತೆಂದೂ ಕೆಲವರು ಯೋಚಿಸಿದರು. ಇದು ಸಾಧ್ಯವಾಗಿದ್ದರೆ, ಕ್ರಿಸ್ತನು ಪರಲೋಕವನ್ನು ಎಂದೂ ಬಿಟ್ಟು ಬಿಡುತ್ತಿರಲಿಲ್ಲ, ಯಾಕೆಂದರೆ ಆತನು ಭೂಲೋಕಕ್ಕೆ ಬರುವ ಮೊದಲು ನೀತಿವಂತನಾಗಿದ್ದನು.

ಕ್ರಿಸ್ತನು ನಮ್ಮ ನೀತಿಯ ಮೂಲವಾಗಿದ್ದರೂ (ಯೆರೆಮೀಯ 23:6; 1 ಕೊರಿಂಥ 1:30) ಹಾಗೂ ಆತನಲ್ಲಿ ನಾವು ನೀತಿವಂತರಾಗಿ ಮಾಡಲ್ಪಟ್ಟರೂ (2 ಕೊರಿಂಥ 5:21) ಒಬ್ಬ ವ್ಯಕ್ತಿಯಿಂದ ಇನ್ನೊಂದು ವ್ಯಕ್ತಿಗೆ ನೀತಿಯ ವರ್ಗಾಯಿಸುವಿಕೆ ಇರುವದಿಲ್ಲ. ಕ್ರಿಸ್ತನ ಪ್ರಾಯಶ್ಚಿತ್ತವಿಲ್ಲದೇ ನಾವು ನೀತಿವಂತರೆಂದು ಘೋಷಿಸಲ್ಪಡಲಾರೆವು, ಆದರೆ ಪರಿಶುದ್ಧ ಬರಹಗಳಾಗಲೀ, ವಿವೇಚನೆಯಾಗಲೀ ನೀತಿವಂತನಾಗಿರುವ ಯೇಸುವಿನ ಸ್ಥಿತಿಯು ನಮಗೆ ಅನ್ವಯಿಸುವದೆಂದು ಸೂಚಿಸುವುದಿಲ್ಲ.

ನೀತಿಯು, ಸರಿಯಾಗಿರುವ ಗುಣವು, ಸಂಗತಿಯ ದೇವರ ಪ್ರಕಟನೆಯಿಂದ ಅಸ್ತಿತ್ವದಲ್ಲಿರುವ ಸ್ಥಿತಿಯಾಗಿದೆ, ಪಾಪಿಯ ಮೇಲೆ ಯಾರೋ ಒಬ್ಬರ ಸ್ಥಿತಿಯನ್ನು ಹೊರಿಸುವದರಿಂದ ಅಲ್ಲ. ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ನೀತಿಯನ್ನು ವರ್ಗಾಯಿಸುವುದು ವಿಚಾರ ಯೋಗ್ಯವಾಗಿದ್ದರೆ, ತನ್ನ ಕುಮಾರನನ್ನು ಉಳಿಸುವದಕ್ಕಾಗಿ ದೇವರು ಅದರ ಬಗ್ಗೆ ವಿಚಾರಿಸ ಬಹುದಿತ್ತು. ಆದಾಮನ ಪಾಪವು ಸ್ವಾಸ್ತ್ಯವಾಗಿ ಹೊಂದಿಕೊಳ್ಳದಂತೆ, ಕ್ರಿಸ್ತನ ನೀತಿಯು ವರ್ಗಾಯಿಸಲ್ಪಡಲಿಕ್ಕಾಗುವದಿಲ್ಲ. ಪರಲೋಕದ ಪರಿಹಾರವು ಬೇರೆ ಯಾವುದೋ ಆಗಿರಬೇಕು.

**ಕ್ರಿಸ್ತನನ್ನು ಬದಲಿಯಾಗಿ ಕಳುಹಿಸುವುದೊಂದೆ ಪರಿಹಾರವಾಗಿತ್ತು**

ಜಗತ್ತು ಪ್ರಾರಂಭಿಸುವದಕ್ಕಿಂತ ಮೊದಲು ಪರಲೋಕದ ಕೂಟದಲ್ಲಿ (ನೋಡಿರಿ 1 ಪೇತ್ರ 1:20; ಪ್ರಕಟನೆ 13:8), ಯಾವುದೇ ಯುಗದಲ್ಲಿ ಪ್ರಾಣಿ ಯಜ್ಞಗಳು ಮಾನವ ಪಾಪಗಳನ್ನು ತೆಗೆದು ಹಾಕಲು ಸಾಕಷ್ಟಾಗಿರಲಿಲ್ಲ ಎಂದು ಸಾರಲ್ಪಟ್ಟಿತ್ತು. ಯಾಜ್ಞಿಕ ವಾಗಿ, ಬದಲಾಗಿ ಮರಣವನ್ನು ತಾನು ಹೊಂದಲಿಕ್ಕಾಗುವಂತೆ ಮನುಷ್ಯನಾಗಲು ದೇವರ ಒಬ್ಬನೇ ಮಗನು ಮುಂದೆ ಬಂದನು (ಇಬ್ರಿಯ 10:1-10). "ಇಗೋ ... ನಿನ್ನ ಚಿತ್ತವನ್ನು ಮಾಡಲು ನಾನು ಬಂದಿರುವೆನು" ಎಂದು ತನ್ನ ತಂದೆಗೆ ಹೇಳಿದನು (ವ. 7). ಒತ್ತಾಯವಿರುವದಿಲ್ಲ ಮತ್ತು ಭೂಲೋಕದಲ್ಲಿ ಆತನು ತಲುಪಿದ ನಂತರ ಆತನು ತನ್ನ ಮನಸ್ಸನ್ನು ಬದಲಾಯಿಸಿದರೆ, ಭಯಾನಕವಾದ ಕಾರ್ಯದ ಮುಖಾಂತರ ಆತನು ಹೋಗ ಬೇಕಾಗಿರುವದಿಲ್ಲ ಎಂದು ತಂದೆಯು ವಿವರಿಸಿದನು. ತನ್ನ ಮಗನಿಗೆ ತಂದೆಯ ವಾಗ್ದಾನವು ಯೇಸುವು ಭೂಮಿಯ ಮೇಲಿದ್ದಾಗ ಯೇಸುವಿನಿಂದ ಜ್ಞಾಪಿಸಿಕೊಳ್ಳಲ್ಪಟ್ಟಿತು (ಯೋಹಾನ 10:17, 18).

ಉಳಿದ ನಮ್ಮ ಹಾಗೆಯೇ ಯೇಸುವು ಮಾನವನಾಗಿದ್ದನು. ಶಿಲುಬೆಯ ಆತನ ಭಯಾನಕತೆಗೆ ನಾವು ಸಂಬಂಧಿಸಬಹುದು ಮತ್ತು ಆತನು ನಾಶವಾಗಲಿಕ್ಕಿದ್ದ ಪಟ್ಟಣಕ್ಕೆ ಹೋಗಲಿಕ್ಕೆ ತಾನೇ "ನಿರ್ಧಾರ ಮಾಡಿಕೊಳ್ಳಲಿಕ್ಕೆ" ಕಾರಣವನ್ನು ನಾವು ನೋಡ ಬಹುದು (ಲೂಕ 9:51; 13:33). ಆತನು ಸಾಯಬಾರದು ಮತ್ತು ಹೀಗೆ ಆತನು ಮರಣವನ್ನು ತಪ್ಪಿಸಿಕೊಳ್ಳಬೇಕು ಎಂದು ಪೇತ್ರನು ವಾಗ್ದಾನ ಮಾಡಿದಾಗ ಯೇಸು ಯಾಕೆ ಪೇತ್ರನನ್ನು "ಸೈತಾನ" ಎಂದು ಕರೆದನೆಂಬುದನ್ನು ನಾವು ಅರ್ಥಮಾಡಿಕೊಳ್ಳ ಬಹುದು (ಮತ್ತಾಯ 16:21-23). ಆತನ ಪ್ರಾಣವು ತತ್ತರಿಸಿದಾಗ ಶಿಲುಬೆಯ ಮೇಲಿನ ಆತನ ಭಯಾನಕತೆಯೊಂದಿಗೆ ನಾವು ಸಹ ತಾಪಪಡಬಹುದು. "ತಂದಯೇ, ಈ ತಾಸಿನಿಂದ ನನ್ನನ್ನು ಬಿಡಿಸು" ಎಂದು ಹೇಳುವದರ ಬದಲು, ಯೇಸುವು, "ಆದರೆ ಈ ಉದ್ದೇಶಕ್ಕಾಗಿ ಈ ತಾಸಿಗೆ ನಾನು ಬಂದಿದ್ದೇನೆ" (ಯೋಹಾನ 12:27) ಎಂದು ಹೇಳಲು ತನ್ನನ್ನು ಶಿಸ್ತುಗೊಳಿಸಿ ಕೊಂಡಿದ್ದಕ್ಕಾಗಿ ನಾವು ಸಂತೋಷಪಡತಕ್ಕದ್ದು.

ಗೆತ್ಸೆಮನೆಯ ಭಯಂಕರವಾದ ಹೋರಾಟದಲ್ಲಿ, ಯೇಸುವು ತಾನು ಸಾಯುವದರಿಂದ ಹಿಂದೆಗೆದು ಕೊಳ್ಳಬಹುದೆಂದು ಚೆನ್ನಾಗಿ ತಿಳಿದಿದ್ದನು. ತನ್ನನ್ನು ಬಿಡುಗಡೆ ಮಾಡಲು ದೇವದೂತರ ಗಣಗಳನ್ನು ತಾನು ಕರೆಯ ಬಹುದೆಂದು ತಿಳಿದು ಕೊಂಡಿದ್ದನು (ನೋಡಿರಿ ಮತ್ತಾಯ 26:53), ಆದರೆ ಸಂತೋಷದಿಂದ ಶಿಲುಬೆಯನ್ನು ನಿರಾಕರಿಸಲು ಸಿದ್ಧನಾಗಿರಲಿಲ್ಲ. ಶಿಲುಬೆಯ ದುಃಖವನ್ನೂ ನಾಚಿಕೆಯನ್ನೂ ತಪ್ಪಿಸಿಕೊ ಳ್ಳಲಿಕ್ಕೆ ಆತನು ಆಳವಾಗಿ ಅಪೇಕ್ಷಿಸಿದನು. ಉಳಿಸಲ್ಪಡುವದಕ್ಕಾಗಿ ರಕ್ತದ ಹಣಿಗಳಂತೆ ಬೆವರುಸುರಿಸುತ್ತ, ಅತ್ಯಾಸಕ್ತಿಯಿಂದ ಪ್ರಾರ್ಥಿಸಿದನು. ಲೋಕದ ಪಾಪಗಳಿಗಾಗಿ ಪ್ರಾಯಶ್ಚಿತ್ತ ಮಾಡಲು ತಂದೆಯು ಬೇರೆ ಇತರ ಮಾರ್ಗದ ಬಗ್ಗೆ ಯೋಚಿಸಿದ್ದಾರೆ, ಯೇಸುವು ಕಲ್ವಾರಿಯ ಮೇಲಿನ ತನ್ನ ಶ್ರಮೆಯು ತನ್ನಿಂದ ದಾಟಿ ಹೋಗ ಬೇಕೆಂದು ಬಯಸಿದ್ದನು.

ತನ್ನ ಜ್ಞಾನದ ಐಶ್ವರ್ಯಗಳ ಆಳದಲ್ಲಿಯೂ ಸಹ, ಸರ್ವ ಜ್ಞಾನಿಯಾದ ದೇವರು ಸಾಕಷ್ಟಾಗುವ ಬೇರೆ ಯಾವುದೇ ಯೋಜನೆಯನ್ನು ತಿಳಿದಿರಲಿಲ್ಲ. ಬೇರೆ ಯಾವುದೇ ಯೋಜನೆಯನು ಪರಲೋಕದ ಶುದ್ಧತೆಯನ್ನೂ ತಂದೆಯ ನ್ಯಾಯದ ಮಟ್ಟವನ್ನೂ ಒಪ್ಪಂದಕ್ಕೆ ತರುವುದು. ದೇವರು ನ್ಯಾಯವಂತನಾಗಿ ಉಳಿದು ಆದಾಗ್ಯು ಪಾಪಿಗಳನ್ನು ನೀತಿವಂತರೆಂದೆಣಿಸುವದಕ್ಕೆ ದೇವರಿಗೆ ಒಂದೇ ಮಾರ್ಗವು ಲೋಕದ ಪಾಪಗ ಳೊಂದಿಗೆ ಯೇಸುವಿನ ಪ್ರಾಣದ ಶ್ರಮೆಯು ಆತನ ಮೇಲೆ ಒಟ್ಟಾಗಿ ಹೇರಲ್ಪಡುವದನ್ನು

ಆತನು ನೋಡುವುದಾಗಿತ್ತು, ಆಗ ಮಾತ್ರವೇ ಅಪರಾಧದಿಂದ ಪಾಪಿಗಳನ್ನು ಬಿಡುಗಡೆ ಮಾಡುವದರಲ್ಲಿ ಗೌರವವುಳ್ಳವನೆಂದು ತಂದೆ ಭಾವಿಸುವನು (ರೋಮಾಪುರ 3:23-26). ಕಲ್ವಾರಿಯ ಮೇಲೆ ಕೃಪೆಯೂ ಸತ್ಯವೂ ಒಂದನ್ನೊಂದು ಕೂಡಿರುವವು; ನೀತಿಯೂ ಸಮಾಧಾನವೂ ಮುದ್ದಿಟ್ಟು ಕೊಳ್ಳುವವು (ನೋಡಿರಿ ಕೀರ್ತನೆ 85:10).

## ಮುಕ್ತಾಯ

ನಾವೆಷ್ಟು ಧನ್ಯರಲ್ಲವೆ! ದೇವರು ವಿಮೋಚನೆಯ ತನ್ನ ಯೋಜನೆಯನ್ನು ಪ್ರಕಟಿಸಿದಂತೆ, ದೇವದೂತರು, ಪ್ರವಾದಿಗಳೂ ಮತ್ತು ನೀತಿವಂತ ಜನರು ಏನು ಸಂಭವಿಸುವುದೆಂಬುದನ್ನು ನೋಡಲು ಅಪೇಕ್ಷಿಸಿದರು. ನೇಮಕವಾದ ಸಮಯದವರೆಗೆ ಪ್ರಾಯಶ್ಚಿತ್ತ ಪದ್ಧತಿಯ ದುಃಖವನ್ನೂ ಪ್ರಭಾವವನ್ನೂ ಯಾವ ಕಣ್ಣೂ ನೋಡಲಿಲ್ಲ, ಯಾವ ಕಿವಿಯೂ ಕೇಳಿಸಿಕೊಳ್ಳಲಿಲ್ಲ ಹಾಗೂ ಯಾವ ಹೃದಯವೂ ಕಲ್ಪಿಸಲಿಲ್ಲ. ಬರಲಿಕ್ಕಿದ್ದ ಮಹಿಮೆಯನ್ನು ಯಾರೂ ತಿಳಿಯಲಾರದವರಾಗಿದ್ದರು. ಹಾಗಿದ್ದರೂ, ಈಗ, ಒಮ್ಮೆ ರಹಸ್ಯವಾದದ್ದು ಪ್ರಕಟಿಸಲ್ಪಟ್ಟಿದೆ. ದೇವದೂತರು ಮತ್ತು ಮಾನವರು ಇಬ್ಬರೂ, ಶುದ್ಧೀಕರಿಸಲ್ಪಟ್ಟ ಆತ್ಮಗಳ ಸಭೆಯಾಗಿರಲು, ಯೇಸುವಿನ ಪ್ರಾಯಶ್ಚಿತ್ತ ಮರಣದಿಂದ ಹೊರಗೆ ಕರೆಯಲ್ಪಟ್ಟ ಪಾಪಿಗಳ ಸಮೂಹದ ಮೇಲೆ ದಿಟ್ಟಿಸಿ ನೋಡುವಾಗ, ದೇವರ ಬಗೆಬಗೆಯ ಜ್ಞಾನವನ್ನು ನೋಡಲು ಶಕ್ತರಾಗುವರು. ಧರ್ಮದ ಪ್ರತಿಯೊಂದು ಭಾಗವು, ಹೊಸದು ಮತ್ತು ಹಳೆಯದು, ಶಿಲುಬೆಗೆ ಸಂಬಂಧಿಸಿದೆ. ದೇವರು ತನ್ನ ಯೋಜನೆಯನ್ನು ಪೂರ್ತಿಗೊಳಿಸಿದಾಗ ಯಾವುದೂ ಮರೆಯಲ್ಪಡಲಿಲ್ಲ. ಯೇಸುವನ್ನು ಮತ್ತು ಆತನು ಶಿಲುಬೆಗೆ ಹಾಕಲ್ಪಟ್ಟದ್ದನ್ನು ಬಿಟ್ಟು ಬೇರೆನನ್ನೂ ತಿಳಿದಿರಲು ದೇವರ ಸಂದೇಶವಾಹಕರು ನಿರ್ಧರಿಸಿಕೊಂಡಾಗ ಯಾವುದೂ ಬಿಟ್ಟುಬಿಡಲ್ಪಡಲಿಲ್ಲ (ನೋಡಿರಿ 1 ಕೊರಿಂಥ 2:2).

ದೇವರ ಯೋಜನೆಯನ್ನು ತ್ವರಿತಗೊಳಿಸಿದ ಪ್ರೀತಿ, ಅದನ್ನು ರೂಪಿಸಿದ ಜ್ಞಾನ ಹಾಗೂ ಅದನ್ನು ಪರಿಣಾಮಗೊಳಿಸಿದ ಧೈರ್ಯವು ರೋಮಾಂಚನಕಾರಿಯಾದದ್ದೂ ಹೃದಯ ಕಲಕಿಸುವಂಥದ್ದೂ ಆಗಿದೆ. ಆತನ ಕೃಪೆಯು ಪಾಪಗಳಿಗಾಗಿ ದೈವಿಕ ಹೊದಿಕೆಯನ್ನು ಒದಗಿಸಿಕೊಟ್ಟಿತು. ತನ್ನ ಸ್ವಂತ ಪಾಪಭರಿತತೆಯ ಬಗ್ಗೆ ಅಜ್ಞಾನವುಳ್ಳ ಹಾಗೂ ವಿಮೋಚನೆಯ ವಿಧಾನದ ಮಹಿಮೆಯನ್ನು ಹುಚ್ಚುತನದಂತೆ ಧಿಕ್ಕರಿಸುವ ಮಾನವ ಮನಸ್ಸು ದುಃಖಿಸುವಂಥದ್ದೂ ಶೋಕಿಸುವಂಥದ್ದೂ ಕನಿಕರಿ ಸಲ್ಪಡುವಂಥದ್ದೂ ಆಗಿರುತ್ತದೆ.

---

ಟಿಪ್ಪಣಿಗಳು

[1]"Atone" is derived from the Middle English word "attone" "attoon," "aton," meaning "at one, agreed." [2]Katallage. [3]Kippurim. [4]Hata' and hamartano. [5]ದೇವರು ಮಾನವನನ್ನು ಎರಡು ಸ್ವಭಾವಗಳಿಂದ ಮಾಡಿದನು: (1) ಅವನ ಮನಸ್ಸಿನ ನಿಯಮವನ್ನು ಅನುಸರಿಸಿ ಅವನಿಗೆ ಆಂತರ್ಯದ ಮನುಷ್ಯನಿದ್ದಾನೆ (ರೋಮಾಪುರ 7:23, 24) ಅದು ದೇವರ ನಿಯಮದಲ್ಲಿ ಆನಂದಿಸುತ್ತದೆ ಮತ್ತು ಸ್ವಭಾವದಿಂದ ಅದು ತಾನೇ ಸರಿಯಾಗಿರುವ ನೈತಿಕ ವಿಷಯಗಳಲ್ಲಿ ತೀರ್ಮಾನಿಸುತ್ತದೆ (ಲೂಕ 12:57; ರೋಮಾಪುರ 2:14; 1 ಕೊರಿಂಥ 11:14). (2) ಅವನಿಗೆ ಹೊರಗೆ ಶರೀರದ ಮನುಷ್ಯನಿರುತ್ತಾನೆ (ರೋಮಾಪುರ 7:25) ಅದಕ್ಕೆ ಮೃಗಗಳಿಗಿಂತ ಹೆಚ್ಚಿನ ಧರ್ಮವಿರುವದಿಲ್ಲ ಮತ್ತು ತಾನೇ ಅನುಭವಿಸುವದಕ್ಕಿಂತ ಬೇರಾ

ವುದನ್ನೂ ತಿಳಿದಿರುವದಿಲ್ಲ. ಅದು ದೇವರ ನಿಯಮಕ್ಕೆ ಒಳಪಟ್ಟಿರುವದಿಲ್ಲ (ರೋಮಾಪುರ 8:7) ಹಾಗೂ ಹಾಗೆ ಇರಲಾರದು ಯಾಕಂದರೆ ಶರೀರಕ್ಕೆ ವಿವೇಚನೆ ಇರುವದಿಲ್ಲ. ಶರೀರದಲ್ಲಿ ಯಾವುದೇ ನೈತಿಕ ಬಳಿತು ಇರುವದನ್ನು ನಿರೀಕ್ಷಿಸ ಬಾರದು (ರೋಮಾಪುರ 7:8) ಇಲ್ಲವೇ ನೈತಿಕ ಕೆಡುಕನ್ನೂ ನಿರೀಕ್ಷಿಸಬಾರದು. ತನ್ನಷ್ಟಕ್ಕೇ ಬಿಟ್ಟರೆ, ಸ್ವಭಾವದಿಂದ, ಶರೀರವು ಸ್ವೇಚ್ಛೆ ಯನ್ನು ಹುಡುಕುತ್ತದೆ (ಎಫೆಸ 2:3). ಮನುಷ್ಯನ ಶಾರೀರಿಕ ಭಾಗವು ತಾನೇ ಪಾಪವುಳ್ಳ ದ್ದಾಗಿರುವದಿಲ್ಲ. ಅದು ಅನೈತಿಕವಾದದ್ದಾಗಿರುವದಿಲ್ಲ, ಆದರೆ ನೀತಿ ಬಾಹ್ಯವಾದದ್ದಾಗಿದೆ; ನೀತಿ ತತ್ವಗಳು ಯಾವವೆಂದು ಅದು ತಿಳಿದಿರುವದಿಲ್ಲ. ನಡಿಸಲು ಬಿಟ್ಟರೆ ಅದರ ದಿಕ್ಕು ಅನೈತಿಕತೆಯಾಗಿರುತ್ತದೆ, ಆದರೆ ಅದು ಪಾಪದಿಂದ ತುಂಬಿಸಲ್ಪಟ್ಟು ಮಾಡಲ್ಪಡಲಿಲ್ಲ. ದೇವರು ಮಾಡಿದ್ದೆಲ್ಲವೂ ಒಳ್ಳೆಯದಾಗಿತ್ತು. ನಮ್ಮ ತಂದೆ ತಾಯಿಗಳು ನಮ್ಮನ್ನು ಪಾಪದ ಲೋಕದೊಳಗೆ ತರುತ್ತಾರೆ (ಕೀರ್ತನೆ 51:5). ನಮ್ಮ ತಂದೆ ತಾಯಿಗಳು ನಮ್ಮನ್ನು ಇಂಗ್ಲೀಷ್ ಭಾಷೆಯು ಮಾತಾಡಲ್ಪಡುವ ನಾಡಿನೊಳಗೆ ತರಬಹುದು, ಆದರೆ ನಾವು ಭಾಷೆಯನ್ನು ಕಲಿಯ ಬೇಕಾ ಗುತ್ತದೆ. ಅದರಂತೆಯೇ, ಒಬ್ಬ ವ್ಯಕ್ತಿಯು ಪಾಪವನ್ನು ಕಲಿಯುತ್ತಾನೆ (ನೋಡಿರಿ ಅಪೊಸ್ತಲರ ಕೃತ್ಯ 2:8). ಕೀರ್ತನೆ 58:3ರಂತೆ ಕೀರ್ತನೆ 51:5 ಸ್ಪಷ್ಟವಾದ ಪದ್ಯ ಭಾಷೆಯಾಗಿದೆ. ಅಕ್ಷರಶಃವಾಗಿ ನಾವು ಜನಿಸಿದ ಕೂಡಲೇ ಮಾತನಾಡುವದಿಲ್ಲ, ಇಲ್ಲವೇ ಅಷ್ಟು ಬೇಗನೇ ತಪ್ಪಿಹೋಗುವದಿಲ್ಲ; ನಾವು ತಪ್ಪಿಹೋದವರಾಗಿ ಜನಿಸಿರುವದಿಲ್ಲ. ತಪ್ಪಿನಿಂದ ಸರಿಯಾದದ್ದನ್ನು ನಾವು ಕಲಿತುಕೊಳ್ಳುವಂತೆ ತಪ್ಪಿ ಹೋಗುತ್ತೇವೆ. ಆಗ ನಮ್ಮ ಪಾಪಗಳು, ಆದಾಮನ ಪಾಪ ಗಳು ಅಲ್ಲ, ನಮ್ಮನ್ನು ದೇವರಿಂದ ಬೇರೆ ಮಾಡುತ್ತವೆ (ಯೆಶಾಯ 59:1, 2). ನಮ್ಮ ತಂದೆಗಳು ಹುಳಿ ದ್ರಾಕ್ಷೆಯನ್ನು ತಿಂದರೆ ನಮ್ಮ ಹಲ್ಲುಗಳು ಜುಳಿತು ಹೋಗುವದಿಲ್ಲ (ಯೆಹೆಜ್ಕೇಲು 18:2, 3). ನಮ್ಮ ತಂದೆಗಳ ಅನೇಕ ಕೆಟ್ಟ ಕಾರ್ಯಗಳ ಪರಿಣಾಮಗಳನ್ನು ನಾವು ಸಹಿಸಬಹುದು (ವಿಮೋಚ ನಕಾಂಡ 20:5) ಆದರೆ ಅಪರಾಧವನ್ನು ಎಂದೂ ಹೊರುವದಿಲ್ಲ (ಧರ್ಮೋಪದೇಶಕಾಂಡ 24:16). ಪಾಪವು ನಮ್ಮಲ್ಲಿ ಕಂಡು ಬರುವವರೆಗೆ ನಾವು ಸೃಷ್ಟಿಸಲ್ಪಟ್ಟಾಗ ನಾವು ಪೂರ್ಣರೂ, ಪರಿಪೂರ್ಣರೂ ಆಗಿದ್ದೆವು (ಯೆಹೆಜ್ಕೇಲ 28:15). ನಮ್ಮಲ್ಲಿ ಪ್ರಿತಿಯೊಬ್ಬರಲ್ಲಿ ಕರ್ತನು ಆತ್ಮವನ್ನು ರೂಪಿಸುತ್ತಾನೆ ಹಾಗೂ ನಮ್ಮನ್ನು ಆತನು ಪಾಪಿಗಳಂತೆ ಪ್ರಾರಂಭಿಸುವದಿಲ್ಲ (ಜೆಕರ್ಯ 12:1). ಯೇಸುವಿನ ಪ್ರಕಾರವಾಗಿ ಪರಲೋಕಕ್ಕೆ ಯೋಗ್ಯರಾಗುವಂಥ ರೀತಿಯಲ್ಲಿ ಆತನು ನಮ್ಮನ್ನು ಪ್ರಾರಂಭಿಸುವನು (ನೋಡಿರಿ ಮತ್ತಾಯ 19:14). ತಮ್ಮ ಮನಸ್ಸುಗಳನ್ನು ಉಪಯೋಗಿಸದೇ ಇರುವವರ ಬಗ್ಗೆ ಇಲ್ಲವೇ ತಮ್ಮ ಎಡಗೈಯಿಂದ ಬಲಗೈಯನ್ನು ತಿಳಿಯದೇ ಇರುವವರ ಬಗ್ಗೆ ರೋಮಾಪುರ 5:12 ಚರ್ಚಿಸುತ್ತಿರುವದಿಲ್ಲ; ತಮ್ಮಷ್ಟಕ್ಕೆ ತಾವೇ ಪಾಪಮಾಡಿದವರ ಬಗ್ಗೆ ಅದು ಚರ್ಚಿಸುತ್ತದೆ (ರೋಮಾಪುರ 3:9). [6]1 ಕೊರಿಂಥ 15:29 ವಚನವು, ಇಡೀ ಹೊಸ ಒಡಂಬಡಿಕೆಯ ಬೋಧನೆಯ ದೃಷ್ಟಿಕೋನದಲ್ಲಿ ಹಾಗೂ ಅದರ ಹಿನ್ನೆಲೆಯ ದೃಷ್ಟಿಕೋನ ದಲ್ಲಿ, "ಸತ್ತವರಿಗಾಗಿ (ಪುನರುತ್ಥಾನದ ನಿಮಿತ್ತವಾಗಿ) ಬಾಪ್ತಿಸ್ಮ" ಹೊಂದುವುದು ಎಂದು ಉತ್ತಮವಾಗಿ ವ್ಯಾಖ್ಯಾನಿಸಲ್ಪಟ್ಟಿದೆ ಎಂಬುದು ಅಭಿಪ್ರಾಯ.

© 2009 Truth for Today